# ಓದು ಕಲಿಕೆಗೆ ಸಮಯ

**ಮಕ್ಕಳಲ್ಲಿ ಪಠ್ಯದ ಹೊರತಾಗಿ ಬೇರೆ ರೀತಿಯ ಪುಸ್ತಕಗಳನ್ನೂ ಓದುವ ಅಭಿರುಚಿ ಬೆಳೆಸಬೇಕು. ಈ ಓದು, ಅವರ ಜ್ಞಾನಭಂಡಾರ ಹೆಚ್ಚಿಸುವುದಲ್ಲದೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲೂ ಒದಗಿಬರುತ್ತದೆ.**

**■ ಸವಿತಾ ಮಾಧವ ಶಾಸ್ತ್ರಿ**

ಸುಮಾರು 15–20 ವರ್ಷಗಳ ಹಿಂದೆ ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿ ವಾರಪತ್ರಿಕೆ, ದಿನಪತ್ರಿಕೆಗಳನ್ನು ತರಿಸುತ್ತಿದ್ದರು. ದೊಡ್ಡವರು ಮಾತ್ರವಲ್ಲದೆ ಮಕ್ಕಳು ಕೂಡ ಆ ಪುಸ್ತಕಕ್ಕಾಗಿ ಕಿತ್ತಾಡುತ್ತಿದ್ದರು. ಆಗ ಪುಸ್ತಕ ಓದುವ ಹವ್ಯಾಸ ಅಷ್ಟರಮಟ್ಟಿಗೆ ಇದ್ದಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಸ್ಮಾರ್ಟ್‌ಫೋನ್ ಬಂದ ಮೇಲೆ ಮಕ್ಕಳು, ಹಿರಿಯರು ಎಂಬ ಭೇದಭಾವವಿಲ್ಲದೆ ಎಲ್ಲರೂ ಮೊಬೈಲ್ ಮೊರೆಹೋಗಿದ್ದಾರೆ. ಪತ್ರಿಕೆಗಳನ್ನು ಕೂಡ ಮೊಬೈಲ್‌ನಲ್ಲಿಯೇ ಓದುವವರಿದ್ದಾರೆ. ಹೀಗಿರುವಾಗ ಮಕ್ಕಳು ಹೇಗೆ ಪುಸ್ತಕ ಹಿಡಿದು ಓದಿಯಾರು?

ಮಕ್ಕಳಿಗೆ ಓದಿನ ರುಚಿ ಹತ್ತಿಸಬೇಕಾದ ಹಿರಿಯರು ಮೊಬೈಲ್ ಹಿಡಿದು ಅದರಲ್ಲಿ ಬರುವ ಬರಹಗಳನ್ನು ಓದಿ ಆನಂದಿಸುತ್ತಾರೆ. ಪುಸ್ತಕ ಓದುವ ಸಂಸ್ಕೃತಿ ನಶಿಸಿ ಹೋಗುತ್ತಿದೆ. ಇದು ನಿಜವಾಗಲೂ ಆತಂಕಕಾರಿ ಬೆಳವಣಿಗೆ.

ಈ ಮಾಡರ್ನ್ ಯುಗದಲ್ಲಿ ಪೋಷಕರು ಮಕ್ಕಳಿಗೆ ಪ್ರತಿ ಕೆಲಸಕ್ಕೂ ಸಮಯ ನಿಗದಿಪಡಿಸಿರುತ್ತಾರೆ. ಶಾಲೆಯಿಂದ ಬಂದ ಮೇಲೆ ತಿಂಡಿ ತಿಂದು ಹೋಂ ವರ್ಕ್ ಮಾಡಲು, ಆಟ ಆಡಲು, ಟಿ.ವಿ.ಯಲ್ಲಿ ಅವರಿಷ್ಟದ ಕಾರ್ಟೂನ್ ನೋಡಲು, ಒಂದರ್ಧ ಗಂಟೆ ಮೊಬೈಲ್ ನೋಡಲು ಎಂದೇ ಸಮಯದ ಮಿತಿ ಹಾಕಿರುತ್ತಾರೆ. ಇದಲ್ಲದೆ ಸಂಗೀತ, ನೃತ್ಯ ಮುಂತಾದ ಹವ್ಯಾಸದ ಕ್ಲಾಸ್‌ಗಳಿಗೂ ಸೇರಿಸಿರುತ್ತಾರೆ. ಅವರೊಂದಿಗೆ ಸಮಯ ಕಳೆಯಲೆಂದು ಪಿಕ್ನಿಕ್, ಔಟಿಂಗ್, ಶಾಪಿಂಗ್ ಎಂದೆಲ್ಲ ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತಾರೆ. ಆದರೆ ಇದೆಲ್ಲದರ ಜೊತೆಗೆ ಮಕ್ಕಳು ಒಳ್ಳೆಯ ಪುಸ್ತಕಗಳನ್ನು ಓದುವ ಹವ್ಯಾಸ ಕೂಡ ರೂಢಿಸಿಕೊಳ್ಳುವಂತೆ ಮಾಡಬೇಕು.

ವಾರದಲ್ಲಿ ಕನಿಷ್ಠ ಎರಡು ಮೂರು ದಿನವಾದರೂ 'ರೀಡಿಂಗ್ ಟೈಂ' ಎಂದು ನಿಗದಿಪಡಿಸಿ ಮಕ್ಕಳೊಂದಿಗೆ ಪೋಷಕರು ಕೂಡ ಯಾವುದಾದರೂ ಪುಸ್ತಕ ಓದಬೇಕು. ಜೊತೆಜೊತೆಗೆ ಪುಸ್ತಕ ಓದುವುದರಿಂದ, ಓದಿದ ಪುಸ್ತಕಗಳ ಬಗ್ಗೆ ಚರ್ಚಿಸುವುದರಿಂದ ಪೋಷಕರು ಮಕ್ಕಳೊಂದಿಗೆ ಸಮಯ ಕಳೆದಂತಾಗುತ್ತದೆ ಮತ್ತು ಅವರಿಬ್ಬರ ನಡುವಿನ ಬೆಸುಗೆ ಬಲಗೊಳ್ಳುತ್ತದೆ.

ಪುಸ್ತಕ ಓದುವುದರಿಂದ ಸಾಕಷ್ಟು ಲಾಭಗಳಿವೆ.

- ಪುಸ್ತಕವನ್ನು ಕೈಯಲ್ಲಿ ಹಿಡಿದು ಓದುವುದರಿಂದ ಮಕ್ಕಳಲ್ಲಿ ಏಕಾಗ್ರತೆ ಹೆಚ್ಚುತ್ತದೆ. ಮೊಬೈಲ್‌ನಲ್ಲಿ ಓದುವಾಗ ಆಗುವ ಚಿತ್ತಚಾಂಚಲ್ಯ ಪುಸ್ತಕ ಓದುವಾಗ ಇಲ್ಲದಿರುವುದರಿಂದ ಮಕ್ಕಳು ತನ್ಮಯತೆಯಿಂದ ಓದುತ್ತಾರೆ.
- ಪುಸ್ತಕ ಜ್ಞಾನಾರ್ಜನೆಯ ಮಾರ್ಗ ಮಾತ್ರವಲ್ಲದೆ ಮಕ್ಕಳ ಕಲ್ಪನಾಶಕ್ತಿ ಹೆಚ್ಚಲೂ ಸಹಕರಿಸುತ್ತದೆ. ಶಬ್ದಭಂಡಾರವೂ ಹೆಚ್ಚುತ್ತದೆ.
- ಪರೀಕ್ಷೆಯಲ್ಲಿ ಕೇಳುವ ಪ್ರಬಂಧ ಅಥವಾ ಪ್ರಶ್ನೋತ್ತರಗಳನ್ನು ಬರೆಯುವಾಗ ಬಹಳಷ್ಟು ಮಕ್ಕಳಿಗೆ ವಿಷಯ ಜ್ಞಾನವಿದ್ದರೂ ಅದನ್ನು ಪದಗಳಲ್ಲಿ ಹೇಗೆ ಪ್ರಸ್ತುತಪಡಿಸಬೇಕು, ವಾಕ್ಯ ಹೇಗೆ ರಚಿಸಬೇಕು ಎಂಬ ಅರಿವಿರುವುದಿಲ್ಲ. ಹೆಚ್ಚಿನ ಮಕ್ಕಳು ಪ್ರಶ್ನೋತ್ತರಗಳನ್ನು ಕಂಠಪಾಠ ಮಾಡಿ ಬರೆಯುತ್ತಾರೆ. ಆಗ ಒಂದು ಸಾಲು ಮರೆತು ಹೋದರೂ ಅವರಿಗೆ ಉತ್ತರ ಮುಂದುವರಿಸಲು ಆಗುವುದಿಲ್ಲ. ಒಂದು ಪದ ಕೊಟ್ಟು ಸ್ವಂತ ವಾಕ್ಯ ರಚಿಸಿ ಎಂದರೆ, ಕೆಲವು ಮಕ್ಕಳು ಬರೆಯಲು ಬರದೆ ಕಕ್ಕಾಬಿಕ್ಕಿ ಆಗುತ್ತಾರೆ. ಮಕ್ಕಳಲ್ಲಿನ ಈ ರೀತಿಯ ಬರವಣಿಗೆಯ ತೊಡಕು ನಿವಾರಿಸಲು ಅವರಿಗೆ ಪುಸ್ತಕ ಓದುವ ಹವ್ಯಾಸ ರೂಢಿಸಬೇಕು.
- ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿದಷ್ಟು ಅವರಿಗೆ ವಿಷಯ ಮಂಡನೆಯ ಅರಿವು ಮೂಡುತ್ತದೆ. ಯಾವುದೇ ಒಂದು ವಿಷಯವನ್ನು ಹೇಗೆ ಪ್ರಸ್ತುತಪಡಿಸಬೇಕು, ಹೇಗೆ ವಿಸ್ತರಿಸಬೇಕು ಎಂಬ ಸಂಗತಿಗಳೆಲ್ಲ ಒಳ್ಳೆಯ ಪುಸ್ತಕಗಳ ನಿರಂತರ ಓದಿನಿಂದ ಕರಗತವಾಗುತ್ತದೆ.
- ಓದಿನಿಂದ ಸ್ಫುಟವಾಗಿ ಮಾತನಾಡುವ ಜಾಣ್ಮೆ ಹೆಚ್ಚುತ್ತದೆ. ಮಾತನಾಡುವಾಗ ಪದಗಳಿಗಾಗಿ ತಡಕಾಡುವ ತೊಂದರೆಯೂ ಕಡಿಮೆಯಾಗುತ್ತದೆ. ನಿರಂತರ ಓದು ಅವರ ಬೌದ್ಧಿಕ ಸಂಪತ್ತನ್ನು ಹೆಚ್ಚಿಸುವುದಲ್ಲದೆ ಅವರ ವ್ಯಕ್ತಿತ್ವಕ್ಕೊಂದು ಪ್ರೌಢಿಮೆ ತಂದುಕೊಡುತ್ತದೆ.

ಹಾಗಾದರೆ ಮತ್ತೇಕೆ ತಡ, ನೀವೂ ನಿಮ್ಮ ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸಿ. ಅವರೊಂದಿಗೆ ನೀವೂ ಪುಸ್ತಕ ಓದಿ. ■

